ಇಲಾಖೆ / ವಿಷಯ: DEPARTMENT / SUBJECT: ಸಚಿವ ಸಂಪುಟ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ ದಿನಾಂಕ : DATE : 27/08/2019

ಕೇಂದ್ರಕ್ಕೆ ಮನವಿ ಸಲ್ಲಿಸಲು ಸಂಪುಟ ಸಭೆ ನಿರ್ಣಯ । ಸದ್ಯದಲ್ಲೇ ಪ್ರಧಾನಿ ಭೇಟಿಗೆ ನಿಯೋಗ

# ನೆರೆ ಪರಿಹಾರಕ್ಕೆ ವಿಶೇಷ ಪ್ಯಾಕೇಜ್

■ ವಿಕ ಸುದ್ದಿಲೋಕ ಬೆಂಗಳೂರು 27/8

ಎನ್‌ಡಿಆರ್‌ಎಫ್ ನಿಯಮಾವಳಿ ಪ್ರಕಾರ ರಾಜ್ಯದಲ್ಲಿ ನೆರೆ ಪರಿಹಾರ ಕಲ್ಪಿಸಲು ಅಸಾಧ್ಯವಾಗಿದ್ದು, ವಿಶೇಷ ಪ್ಯಾಕೇಜ್ ಪ್ರಕಟಿಸುಂತೆ ಕೇಂದ್ರ ಸರಕಾರಕ್ಕೆ ಮನವಿ ಸಲ್ಲಿಸಲು ಸೋಮವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿದೆ.

ಸಂಪುಟ ವಿಸ್ತರಣೆಯಾದ ನಂತರ ಸಿಎಂ ಯಡಿಯೂರಪ್ಪ ನೇತೃತ್ವದಲ್ಲಿ ನಡೆದ ಎರಡನೇ ಸಭೆ ಇದಾಗಿದ್ದು, ಪ್ರವಾಹ ಪರಿಸ್ಥಿತಿ ಬಗ್ಗೆ ಅಧ್ಯಯನ ನಡೆಸಲು ಜಿಲ್ಲಾ ಪ್ರವಾಸ ನಡೆಸಿದ್ದ ಪ್ರತಿಯೊಬ್ಬ ಸಚಿವರಿಂದಲೂ ಸುದೀರ್ಘವಾಗಿ ಮಾಹಿತಿ ಸಂಗ್ರಹಿಸಲಾಯಿತು. ನೆರೆ ಹಾಗೂ ಭೂ ಕುಸಿತದಿಂದ ಆದ ಹಾನಿಯನ್ನು ನಿಖರವಾಗಿ ಅಂದಾಜಿಸಲು ಸಾಧ್ಯವಿಲ್ಲದಂತಾಗಿದೆ. ಇದಕ್ಕೆ ಸುದೀರ್ಘ ಸಮಯದ ಅಗತ್ಯವಿದೆ. ಇದರ ಜತೆಗೆ ಕೆಲ ಬೆಳೆಗಳು ಕೇಂದ್ರ ಸರಕಾರದ ವಿಮಾ ಪಟ್ಟಿಯಲ್ಲಿ ಬರದೇ ಇರುವುದರಿಂದ ಪರಿಹಾರ ನೀಡುವುದು ಅಸಾಧ್ಯವಾಗಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರಕಾರ ಮಧ್ಯಂತರ ಪರಿಹಾರ ಕಲ್ಪಿಸುವ ಜತೆಗೆ ವಿಶೇಷ ಪ್ಯಾಕೇಜ್ ಘೋಷಿಸಬೇಕೆಂದು ಒತ್ತಡ ಹೇರಲು ಸಭೆಯಲ್ಲಿ ನಿರ್ಧರಿಸಲಾಗಿದೆ.

ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಚಿವ ಮಾಧುಸ್ವಾಮಿ, ''ಸದ್ಯದಲ್ಲೇ ರಾಜ್ಯದ ಎಲ್ಲ ಸಚಿವರು, ಸಂಸದರ ಜತೆಗೆ ಸಿಎಂ ಯಡಿಯೂರಪ್ಪ ನೇತೃತ್ವದ ನಿಯೋಗ ಪ್ರಧಾನಿ ನರೇಂದ್ರ ಮೋದಿಯವರನ್ನು ಭೇಟಿಯಾಗಿ ಮನವಿ ಸಲ್ಲಿಸಲು ನಿರ್ಧರಿಸಲಾಗಿದೆ. ಜತೆಗೆ ಆ 28ರಂದು ಕೇಂದ್ರ ತಂಡದ ಜತೆಗೆ ಇನ್ನೊಂದು ಸುತ್ತಿನ ಸಭೆ ನಡೆಸಲಾಗುವುದು,'' ಎಂದು ಹೇಳಿದರು.

''ಕೆಲವು ಜಿಲ್ಲೆಗಳಲ್ಲಿ ಹಳ್ಳಿಗೆ ಹಳ್ಳಿಯೇ ಭೂ ಕುಸಿತದಿಂದ ನಾಶವಾಗಿದೆ. ಇನ್ನು ಉತ್ತರ ಕರ್ನಾಟಕ ಭಾಗದಲ್ಲಿ ನದಿ ಪಾತ್ರದ ಗ್ರಾಮಗಳು ಕೊಚ್ಚಿ ಹೋಗಿವೆ. ಸೇತುವೆಗಳು, ಸರಕಾರಿ ಕಚೇರಿಗಳು, ಶಾಲೆಗಳು, ರಸ್ತೆಗಳು ಬಳಕೆ ಮಾಡಲು ಸಾಧ್ಯವಿಲ್ಲ. ಎನ್‌ಡಿಆರ್‌ಎಫ್ ನಿಯಮ ಪ್ರಕಾರ ಬಿಡುಗಡೆಯಾಗುವ ಹಣದಲ್ಲಿ ರಿಪೇರಿ ಕಾರ್ಯವೂ ಸಾಧ್ಯವಿಲ್ಲ. ಚಿಕ್ಕಮಗಳೂರಿನಲ್ಲಿ ನಾಲ್ಕು ಹಳ್ಳಿಯ ಜನರು ಶಾಶ್ವತವಾಗಿ ಸ್ಥಳಾಂತರ ಮಾಡಿ ಎಂದು ಮನವಿ ಮಾಡಿದ್ದಾರೆ. ನಿಯಮ ಪ್ರಕಾರ ಇದಕ್ಕೆ ಕೇಂದ್ರ ಸರಕಾರ ಹಣ ಬಿಡುಗಡೆ ಮಾಡಲು ಸಾಧ್ಯವಿಲ್ಲ. ಹೀಗಾಗಿ ವಿಶೇಷ ಪ್ಯಾಕೇಜ್ ಘೋಷಣೆ ಅನಿವಾರ್ಯವಾಗಿದೆ. ಜತೆಗೆ ಕಾಫಿ, ಸಾಂಬಾರ ಬೆಳೆಗಳನ್ನು ಇನ್ಶೂರೆನ್ಸ್ ವ್ಯಾಪ್ತಿಗೆ ತರುವಂತೆ ಮನವಿ ಮಾಡಲು ಸಂಪುಟ ಸಭೆಯಲ್ಲಿ ನಿರ್ಧಾರ ತೆಗೆದುಕೊಳ್ಳಲಾಗಿದೆ,'' ಎಂದರು.



## ಎನ್‌ಪಿಎಸ್ ನೌಕರರ ಸಂಘದ ಅತೃಪ್ತಿ

■ ವಿಕ ಸುದ್ದಿಲೋಕ ಬೆಂಗಳೂರು

ರಾಜ್ಯ ಸರಕಾರಿ ನೌಕರರಿಗೆ ಎನ್‌ಪಿಎಸ್ ಪಿಂಚಣಿ ಯೋಜನೆಯಡಿ ರಾಜ್ಯ ಸರಕಾರದ ಪಾಲನ್ನು ಶೇ.10ರಿಂದ ಶೇ.14ಕ್ಕೆ ಏರಿಕೆ ಮಾಡಿರುವ ಸಚಿವ ಸಂಪುಟದ ತೀರ್ಮಾನಕ್ಕೆ ಎನ್‌ಪಿಎಸ್ ನೌಕರರ ಸಂಘ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

''ಈ ಹಿಂದೆ ಪ್ರತಿಪಕ್ಷ ನಾಯಕರಾಗಿದ್ದ ಸಂದರ್ಭದಲ್ಲಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರು ಎನ್‌ಪಿಎಸ್ ರದ್ದುಗೊಳಿಸಿ, ರಾಜ್ಯ ಸರಕಾರಿ ನೌಕರರಿಗೆ ಹಳೇ ಪಿಂಚಣಿ ಯೋಜನೆ ಜಾರಿಗೆ ಒತ್ತಾಯಿಸಿದ್ದರು. ಆದರೆ, ಈಗ ಸಿಎಂ ಆಗಿ ಪಿಂಚಣಿಗೆ ಸರಕಾರದ ವಂತಿಗೆಯನ್ನು ಶೇ.4 ಹೆಚ್ಚಳ ಮಾಡುವ ಮೂಲಕ ಕೇವಲ ಕಣ್ಣೊರೆಸುವ ತಂತ್ರ ಮಾಡಿದ್ದಾರೆ'' ಎಂದು ರಾಜ್ಯ ಎನ್‌ಪಿಎಸ್ ನೌಕರರ ಸಂಘದ ಅಧ್ಯಕ್ಷ ರಮೇಶ್ ಜಿ.ಸಂಗ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

''ಎನ್‌ಪಿಎಸ್ ರದ್ದತಿ ಬೇಡಿಕೆ ಪರಾಮರ್ಶೆಗೆ ಈಗಾಗಲೇ ಉನ್ನತ ಮಟ್ಟದ ಸಮಿತಿ ರಚನೆಯಾಗಿದೆ. ಸಮಿತಿ ವರದಿಗೆ ಮುನ್ನವೇ ಕೇಂದ್ರ ಮತ್ತು ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳಲ್ಲಿರುವಂತೆ ಸರಕಾರದ ವಂತಿಗೆಯನ್ನು ಶೇ.14ಕ್ಕೆ ನಿಗದಿ ಮಾಡಿ ಕೈತೊಳೆದುಕೊಳ್ಳುವ ಕೆಲಸ ಮಾಡಿದೆ'' ಎಂದು ಅವರು ದೂರಿದ್ದಾರೆ.

## ಸಂಪುಟದ ಇತರ ನಿರ್ಣಯಗಳು

■ ರಾಜ್ಯ ಸರಕಾರಿ ನೌಕರರಿಗೆ ಪಿಂಚಣಿ ಕೊಡುಗೆ ಹೆಚ್ಚಳಕ್ಕೆ ನಿರ್ಧಾರ. ಈ ಹಿಂದೆ ರಾಜ್ಯ ಸರಕಾರ ನೀಡುತ್ತಿದ್ದ ಶೇ.10ರ ಪಿಂಚಣಿ ಪ್ರಮಾಣವನ್ನು ಕೇಂದ್ರದ ಮಾದರಿಯಲ್ಲಿ ಶೇ.14ಕ್ಕೆ ಹೆಚ್ಚಿಸಲು ಕ್ರಮ. ಇದರಿಂದ ರಾಜ್ಯ ಸರಕಾರದ ಬೊಕ್ಕಸಕ್ಕೆ ವಾರ್ಷಿಕ 300 ಕೋಟಿ ರೂ. ಹೆಚ್ಚುವರಿ ಹೊರೆ ಬೀಳಲಿದೆ



■ ದಾವಣಗೆರೆ ಜಿಲ್ಲೆ ಜಗಳೂರಿನ 40 ಕೆರೆಗಳಿಗೆ ನೀರು ತುಂಬಿಸಲು 250 ಕೋಟಿ ರೂ. ಬಿಡುಗಡೆ

■ ಸಂಬಂಧಿಕರ ಮನೆಯಲ್ಲಿರುವ ನೆರೆ ಸಂತ್ರಸ್ತ ಕುಟುಂಬಗಳಿಗೆ 10 ಸಾವಿರ ರೂ.ತಾತ್ಕಾಲಿಕ ಪರಿಹಾರ

■ ನೆರೆ ಹಿನ್ನೆಲೆಯಲ್ಲಿ ಬೋರ್ ಕೊರೆಯುವುದು ಹಾಗೂ ಇತರೆ ಅಗತ್ಯ ಕಾಮಗಾರಿಗಳಿಗೆ ಇನ್ನು ಮುಂದೆ ಗಾಂಧಿ ಸಾಕ್ಷಿ ತಂತ್ರಾಂಶದ ಒಪ್ಪಿಗೆ ಬೇಕಿಲ್ಲ. ಮಾರ್ಚ್ ಅಂತ್ಯದವರೆಗೆ ಜಿಲ್ಲಾ ಪಂಚಾಯಿತಿ ಹಾಗೂ ಶಾಸಕರ ಅಧ್ಯಕ್ಷತೆಯ ಟಾಸ್ಕ್ ಫೋರ್ಸ್ ಒಪ್ಪಿಗೆ ಮಾತ್ರ ಸಾಕು



■ ರಾಜ್ಯದಲ್ಲಿ ಭೂ ವಿಜ್ಞಾನಿಗಳ ಕೊರತೆ ಇದ್ದು ಖಾಲಿ ಹುದ್ದೆಗಳಿಗೆ ನಿವೃತ್ತ ವಿಜ್ಞಾನಿಗಳನ್ನು ಗುತ್ತಿಗೆ ಆಧಾರದ ಮೇಲೆ ನಿಯೋಜನೆ

■ ಕೃಷ್ಣಾ, ಕಾವೇರಿ ಹಾಗೂ ಮಹದಾಯಿ ನದಿಗಳ ಅಂತಾರಾಜ್ಯ ವಿಚಾರಗಳ ನಿರ್ವಹಣೆಗಾಗಿ ಯಡಿಯೂರಪ್ಪ ನೇತೃತ್ವದಲ್ಲಿ ಸಂಪುಟ ಉಪಸಮಿತಿ ರಚನೆ. ಬಸವರಾಜ ಬೊಮ್ಮಾಯಿ, ಗೋವಿಂದ ಕಾರಜೋಳ ಹಾಗೂ ಆರ್.ಅಶೋಕ ಸಮಿತಿ ಸದಸ್ಯರಾಗಿರಲಿದ್ದಾರೆ



■ 10 ವರ್ಷ ಶಿಕ್ಷೆ ಪೂರೈಸಿದ ಸನ್ನಡತೆ ಹೊಂದಿ 140 ಕೈದಿಗಳ ಅವಧಿಪೂರ್ವ ಬಿಡುಗಡೆಗೆ ನಿರ್ಧಾರ